**ಸಿ ಸಿ ನಂ. 96/2019**

**ಪಿಡಬ್ಲ್ಯೂ - 1 ಅಬ್ರಹಂ ಮಣಿ**

**<u>ದಿನಾಂಕ 03-11-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು : ಶ್ರೀ. ಎಸ್ ಬಿ ಎಂ ಆರೋಪಿ ಪರ ವಕೀಲರಿಂದಃ</u>**

ರಾಜೇಶ್ ಎನ್ನುವವರು ಚಿನ್ನದ ಅಂಗಡಿ ಇಟ್ಟುಕೊಂಡಿರುತ್ತಾರೆ. ನಾನು ರಾಜೇಶ್ ಎನ್ನುವವರಿಗೆ ಮೂರು ಲಕ್ಷ ಸಾಲ ಕೊಟ್ಟಿದ್ದು, ಆ ಸಂಬಂಧ ಪಡೆದುಕೊಂಡ ಹಣವನ್ನು ತೀರಿಸುವ ಸಲುವಾಗಿ ಸದರಿ ರಾಜೇಶ್ ರವರು ನನಗೆ ಮೂನ್ನೂರು ಚೀಲ ಶುಂಠಿಯನ್ನು ನೀಡುವುದಾಗಿ ನನ್ನ ಹಾಗೂ ಸದರಿ ರಾಜೇಶ್ ನಡುವೆ ದಿನಾಂಕ 23-02-2015 ರಂದು ಒಂದು ಒಪ್ಪಂದ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಒಪ್ಪಂದ ಪತ್ರದ ಮೂಲಪ್ರತಿ ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜೇಶ್ ಈಗ ಎಲ್ಲಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸುಮಾರು ವರ್ಷಗಳಿಂದ ಅವರು ನೆಲ್ಲಿಹುದಿಕೇರಿ ಗ್ರಾಮದಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿ. ಆರೋಪಿ ಹಾಗೂ ಸದರಿ ರಾಜೇಶ್ ರವರು ಪರಿಚಯಸ್ಥರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ರಾಜೇಶ್ ನು ನನ್ನಿಂದ ಪಡೆದುಕೊಂಡ ಸಾಲವನ್ನು ಹಿಂತಿರುಗಿಸದೆ, ಮೇಲೆ ತಿಳಿಸಿದ ಒಪ್ಪಂದ ಪತ್ರದ ಪ್ರಕಾರ ಶುಂಠಿಯನ್ನು ನೀಡದೆ, ಊರನ್ನು ಬಿಟ್ಟು ಹೋಗಿದ್ದು, ಸದರಿ ರಾಜೇಶ್ ಹಾಗೂ ಆರೋಪಿ ಸ್ನೇಹಿತರಾದ್ದರಿಂದ ಸದರಿ ಹಣವನ್ನು ಆರೋಪಿಯಿಂದ ಪಡೆದುಕೊಳ್ಳುವ ಉದ್ದೇಶದಿಂದ ಆರೋಪಿ ವಿರುದ್ಧ ಪೋಲಿಸರಿಗೆ ಒತ್ತಡ ಹಾಕಿ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಆ ರೀತಿ ಪೋಲಿಸ್ ಠಾಣೆಯಲ್ಲಿ ಒತ್ತಡ ಹೇರಿ ಆರೋಪಿಯಿಂದ ಸಹಿ ಮಾಡಿದ ನಿಪಿ1 ಖಾಲಿ ಚೆಕ್ ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ಬಳಸಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ರಾಜೇಶ್ ಹಾಗೂ ಆರೋಪಿ ಜೊತೆಯಾಗಿ ಶುಂಠಿ ವ್ಯಾಪಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ರಾಜೇಶ್ ಹಣವನ್ನು ವಾಪಸ್ಸು ಕೊಟ್ಟಿರದ ಕಾರಣ ನಾನು ರಾಜೇಶ್ ನೊಂದಿಗೆ ಮಾಡಿಕೊಂಡ ರೀತಿಯ ಒಪ್ಪಂದ ಪತ್ರವನ್ನು ದಿನಾಂಕ 16-03-2015 ರಂದು ಆತನ ವ್ಯಾಪಾರದ ಪಾಲುದಾರನಾದ ಆರೋಪಿಯ ಜೊತೆಯೂ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದರ ಮೂಲ ಪ್ರತಿ ನನ್ನ ಬಳಿಯಿದ್ದು, ಜೆರಾಕ್ಸ್ ಪ್ರತಿ ಆರೋಪಿ ಇರುತ್ತದೆ ಎಂದರೆ

ಸರಿಯಲ್ಲ. ನಾನು ಆ ರೀತಿ ರಾಜೇಶ್ ಹಣವನ್ನು ಕೊಡದೆ ತಪ್ಪಿಸಿಕೊಂಡು ಹೋದ ಮೇಲೆ ಆರೋಪಿಯಿಂದ ಮೂನ್ನೂರು ಚೀಲ ಶುಂಠಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಆರೋಪಿಯಿಂದ ನಾನು ಮೂನ್ನೂರು ಚೀಲ ಶುಂಠಿಯನ್ನು ಪಡೆದುಕೊಂಡಾಗಿಯೂ ಸಹ ಪೋಲಿಸ್ ಠಾಣೆಯಲ್ಲಿ ಆರೋಪಿಯ ಮೇಲೆ ಒತ್ತಡ ಹೇರಿ ಪಡೆದುಕೊಂಡ ನಿಪಿ1 ಖಾಲಿ ಚೆಕ್ ನ್ನು ದುರ್ಬಳಕೆ ಮಾಡಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ನನ್ನಿಂದ ಸಾಲ ಪಡೆದುಕೊಂಡ ದಿನವೇ ನಿಪಿ1 ಚೆಕ್ ನ್ನು ನೀಡಿರುತ್ತಾರೆ. ಆರೋಪಿಯು 2018 ನೇ ಇಸವಿಯ ನವೆಂಬರ್ ತಿಂಗಳನ್ನು ನಮೂದಿಸಿ ಚೆಕ್ ನ್ನು ನೀಡಿರುತ್ತಾರೆ. ನನಗೆ ಆರೋಪಿ ನಿಪಿ1 ಚೆಕ್ ರಲ್ಲಿರುವ ತಿಳಿಸಿರುವ ಯಾವುದೇ ಹಣವನ್ನು ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಹಣ ಗಳಿಸುವ ಉದ್ದೇಶದಿಂದ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ